# ಕಲ್ಲಿನ ಸರಪಳಿ

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ದೊಡ್ಡೇರಿಯ ಕನ್ನೇಶ್ವರ ಆಶ್ರಮದ ಗುರುದತ್ತ ಮಂದಿರದಲ್ಲಿ ರಾಜಗೋಪುರದ ಕೆಳಗೆ (ಆಗಮನ ಬಾಗಿಲಿನ ಒಳಗೆ) ಕೇವಲ ಕಲ್ಲಿನಿಂದ ಸರಪಳಿ ಮಾಡಲಾಗಿದೆ. ಶೃಂಗೇರಿ–ಕೊಪ್ಪ–ಕಳಸದ ಪುರಾತನ ಮಂದಿರಗಳಲ್ಲಿ ಮಾತ್ರ ನೋಡಬಹುದಾಗಿದ್ದ ಈ ವಿಸ್ಮಯ ಆಧುನಿಕ ಮಂದಿರದಲ್ಲಿ ಕಂಡು ಬಂದಿರುವುದು ನಿಜಕ್ಕೂ ಆಶ್ಚರ್ಯ ತರುವ ವಿಚಾರ. ಅತೀ ಕ್ಲಿಷ್ಟಕರವಾದ ಈ ವಿಧಾನ ನಿಜಕ್ಕೂ ಬೆರಗುಗೊಳಿಸುತ್ತದೆ. ಇದು 2–3 ವರ್ಷ ಹಳೆಯ ಮಂದಿರವಾಗಿದೆ.

**-ಡಾ.ಕೆ.ವಿ. ಸಂತೋಷ್, ಚಿತ್ರದುರ್ಗ**





# ಮನೆ ಮನೆಗೆ ಮಾರಿಯಮ್ಮ...

ಈ ಚಿತ್ರದಲ್ಲಿರುವ ಹುಡುಗಿ ಮಲ್ಲಮ್ಮ ಶಿರಸಿಯ ಮಾರಿಕಾಂಬಾ ದೇವಿಯ ಮೂರ್ತಿಯ ಪ್ರತಿರೂಪವನ್ನು ತಲೆಯ ಮೇಲೆ ಹೊತ್ತು, ಕೈಯಲ್ಲಿ ವಾದ್ಯವೊಂದನ್ನು ಹಿಡಿದಿರುವುದನ್ನು ನೋಡಬಹುದು. ಹೀಗೆ ಮಾರಿ ದೇವಿಯ ಮೂರ್ತಿಯನ್ನು ಮನೆ ಮನೆಗೆ ಒಯ್ದು, 'ಡುಮು ಡುಮು' ಎಂದು ವಾದ್ಯ ಬಾರಿಸುತ್ತಾ, ಭಕ್ತರಿಗೆ ಕುಂಕುಮ ಪ್ರಸಾದ ನೀಡಿ, ಅವರು ನೀಡಿದಷ್ಟು ಕಾಣಿಕೆಯನ್ನು ಸ್ವೀಕರಿಸಿ, ಮುಂದಿನ ಮನೆಗೆ ತೆರಳುವುದು  ಇವರ ಕಾಯಕ. ಕೆಲವೊಮ್ಮೆ ಇವರ ಸಂಗಡ ಇವರ ಅಣ್ಣನೋ, ಗಂಡನೋ, ತಂದೆಯೋ.. ಯಾರಾದರೊಬ್ಬರು ಪುರುಷರು ಬಂದು, ಬಾರುಕೋಲಿನಿಂದ 'ಚಟಲ್ ಚಟಲ್' ಎಂದು ಬೆನ್ನಿಗೆ ಬಾರಿಸಿಕೊಳ್ಳುತ್ತಾ, ಸಾಥ್ ನೀಡುವುದೂ ಇದೆ! ಈ ತರಹದ ಹೊಟ್ಟೆಪಾಡಿನ ಜನರನ್ನು ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನೋಡಬಹುದು.

**ಚಿತ್ರ- ಬರಹ: ನಾರಾಯಣ ಯಾಜಿ, ಶಿರಾಲಿ**



# ಅಡಕೆ ಕಲೆ

ಚಿತ್ರದಲ್ಲಿರುವುದು ಅಡಕೆಯಿಂದ ತಯಾರು ಮಾಡಿದ ಅರ್ಚಕ ಹಾಗೂ ಗಣಪನ ಕಲಾಕೃತಿ. ಇದನ್ನು ತಯಾರಿಸಲು ಏಲಕ್ಕಿ, ಲವಂಗ,  ಅಡಕೆ ಮತ್ತು ಅಡಕೆ ಸಿಪ್ಪೆ ಹಾಗೂ ಬಿದಿರಿನ ಕಡ್ಡಿಯನ್ನು ಬಳಸಿರುವುದು ವಿಶೇಷ. ಮೈಸೂರಿನಲ್ಲಿ 9ನೇ ತರಗತಿ ಓದುತ್ತಿರುವ ಅದಿತಿ ಶಾಲಾ ರಜಾ ದಿನಗಳಲ್ಲಿ ಈ ಕಲಾಕೃತಿಗಳನ್ನು ಮಾಡಿದ್ದಾಳೆ.

**-ಲೀಲಾವತಿ ಜಯಶೀಲ, ಶಿವಮೊಗ್ಗ**

